ಆ) ಹಾಗಿದ್ದಲ್ಲಿ ಈ ಕಟ್ಟಡ ನಿರ್ಮಾಣಕ್ಕಾಗಿ ತಗಲುವ ಖರ್ಚು ಮತ್ತು ಅವಧಿ ಎಷ್ಟು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಮತ್ತು ವಕ್ಫ್ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಜಿಲ್ಲಾ ಪರಿಷತ್ ವತಿಯಿಂದ ಆರಂಭಿಸಿರುವ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳ ಬಗ್ಗೆ

(2096): ಶ್ರೀ. ಎಂ.ಎಸ್. ಆತ್ಮಾನಂದ (ಮಂಡ್ಯ):-

ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಾದ್ಯಂತ ಅನೇಕ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಆಸ್ಪತ್ರೆಗಳನ್ನು ಸರ್ಕಾರದವರ ಅನುಮತಿಯಿಲ್ಲದೆ, ಜಿಲ್ಲಾ ಪರಿಷತ್‌ಗಳ ವತಿಯಿಂದ ಪ್ರಾರಂಭಿಸಿರುವುದನ್ನು ಸರ್ಕಾರವು ಗಮನಿಸಿದೆಯೆ;

ಆ) ಹಾಗಿದ್ದಲ್ಲಿ, ಈ ಪಶು ವೈದ್ಯಕೀಯ ಚಿಕಿತ್ಸಾ ಕೇಂದ್ರಗಳನ್ನು ಹಾಗೂ ಆಸ್ಪತ್ರೆಗಳನ್ನು ಸಕ್ರಮಗೊಳಿಸಲು ಸರಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) ಹೌದು.

ಆ) ಸಕ್ರಮಗೊಳಿಸಲು ಆಲೋಚಿಸಲಾಗುವುದು.

ರಾಜ್ಯದಲ್ಲಿ ಶಿಥಿಲವಾದ ಶಾಲಾ ಕಟ್ಟಡಗಳ ಸಂಖ್ಯೆ

(2145): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಳೆಯದಾಗಿ ಶಿಥಿಲವಾಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) 1993-94ನೇ ಸಾಲಿನಲ್ಲಿ ಈ ಶಾಲಾ ಕಟ್ಟಡಗಳ ದುರಸ್ತಿಯ ಬಗ್ಗೆ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳೇನು;

ಇ) ಮಂಡ್ಯ ತಾಲ್ಲೂಕು, ಬಸರಾಳು ಗ್ರಾಮದಲ್ಲಿರುವ ಪ್ರಾಥಮಿಕ ಶಾಲೆಯ ಕಟ್ಟಡ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಈ) ಶಾಲಾ ಮಕ್ಕಳ ಅನುಕೂಲಕ್ಕಾಗಿ ಸದರಿ ಕಟ್ಟಡವನ್ನು ದುರಸ್ತಿಗೊಳಿಸಲು ಸರ್ಕಾರವು ಕ್ರಮ ಕೈಗೊಳ್ಳಲಾಗಿದೆಯೇ, ಹಾಗಿದ್ದಲ್ಲಿ ಎಂದಿನಿಂದ ?

ಡಾ॥ ಹೆಚ್.ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) 1. ಪ್ರಾಥಮಿಕ ಶಾಲೆಗಳು: 2384
2. ಪ್ರೌಢಶಾಲೆಗಳು: 0174
(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಶಾಲಾ ಕಟ್ಟಡಗಳ ದುರಸ್ತಿಗಾಗಿ 1993–94ನೇ ಸಾಲಿನ ಆಯವ್ಯಯದಲ್ಲಿ ರೂ. 210–00 ಲಕ್ಷಗಳನ್ನು ಒದಗಿಸಲಾಗಿದೆ.

ಇ) ಬಸರಾಳು ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೂ ಕಟ್ಟಡಕ್ಕೆ ಸಣ್ಣಪುಟ್ಟ ದುರಸ್ತಿ ಮಾಡಲು ಜಿಲ್ಲಾ ಪರಿಷತ್ತಿನಿಂದ ಕ್ರಮ ಕೈಗೊಳ್ಳಲು ತಿಳಿಸಿದೆ.

ಈ) ಸದರಿ ಶಾಲಾ ಕಟ್ಟಡದ ಎರಡು ಕೊಠಡಿಗಳನ್ನು ದುರಸ್ತಿ ಪಡಿಸಬೇಕಾಗಿದ್ದು, ಪ್ರಸ್ತುತ 1992–93ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ವತಿಯಿಂದ ದುರಸ್ತಿ ಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಹಳೆಯದಾಗಿ ಶಿಥಿಲವಾಗಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಪಟ್ಟಿ

ಕ್ರ.ಸಂ. ಜಿಲ್ಲೆಯ ಹೆಸರು	ಶಿಥಿಲವಾಗಿರುವ ಕಟ್ಟಡ		ದುರಸ್ತಿಗಾಗಿ ಅಂದಾಜು	
	ಪ್ರಾಥಮಿಕ ಶಾಲೆ	ಪ್ರೌಢಶಾಲೆ	ಪ್ರಾಥಮಿಕ ಶಾಲೆ	ಪ್ರೌಢಶಾಲೆ
1. ಬೆಂಗಳೂರು ಉತ್ತರ				
2. ಬೆಂಗಳೂರು ದಕ್ಷಿಣ				
3. ಬೆಂಗಳೂರು (ಗ್ರಾಮಾಂತರ)				
4. ಕೋಲಾರ	1			
5. ತುಮಕೂರು	530	51	–	–
6. ಶಿವಮೊಗ್ಗ	147	08	18.95	29.58
7. ಚಿತ್ರದುರ್ಗ	375	08	14.00	12.50
8. ಮೈಸೂರು	103	37	–	–
9. ಹಾಸನ	168	28	–	–
10. ಮಂಡ್ಯ	3	–	5.00	–
11. ದಕ್ಷಿಣ ಕನ್ನಡ				
12. ಕೊಡಗು				
13. ಚಿಕ್ಕಮಗಳೂರು				
14. ಬೆಳಗಾವಿ	393	5	32.80	4.50
15. ಬಿಜಾಪುರ	408			
16. ಧಾರವಾಡ	111	5		
17. ಉತ್ತರ ಕನ್ನಡ				
18. ಗುಲ್ಬರ್ಗಾ				
19. ರಾಯಚೂರು	86	27	8.00	–
20. ಬಳ್ಳಾರಿ				
21. ಬೀದರ್	59	05		
ಒಟ್ಟು	2384	174	78.75	46.58

ಅಧ್ಯಕ್ಷರು:– ಪಟ್ಟಿಯನ್ನು ಮಂಡಿಸಲಾಯಿತು.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ಕಾಲ ಮುಗಿದ ನಂತರ ಪ್ರಿವಿಲೇಜ್ ನೋಟೀಸ್ ತೆಗೆದುಕೊಳ್ಳಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರ ವಿರುದ್ಧ ಒಂದು ಪ್ರಿವಿಲೇಜ್ ನೋಟೀಸ್ ಅನ್ನು ಕಳುಹಿಸಿದ್ದೇನೆ. ಮಾನ್ಯ ರಾಯರೆಡ್ಡಿಯವರ ಪ್ರಶ್ನೆಗೆ ಉತ್ತರ ಕೊಡುವಾಗ ಈ ಸದನದಲ್ಲಿ ಮಂತ್ರಿ ಮತ್ತು ಶಾಸಕರ ಮೇಲೆ ಮೊಕದ್ದಮೆಗಳು ಏನಿವೆ ಅವುಗಳ ವಿವರವನ್ನು ಕೊಟ್ಟಿದ್ದರು, ಆದರೆ ಆದರಲ್ಲಿ ಮಾನ್ಯ ಗೋಪಿನಾಥ ಸಾಂಡ್ರರವರ ವಿರುದ್ಧ ಏನು ಮೊಕದ್ದಮೆ ಇತ್ತು, ಆದರ ಬಗ್ಗೆ ವರದಿಯನ್ನು ಕಳುಹಿಸಲಿಲ್ಲ. ಹಾಗಾಗಿ ಇವತ್ತು ಮುಖ್ಯಮಂತ್ರಿಗಳು ಇಲ್ಲ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗಾಗಲೇ ನಾನು ಮತ್ತು ಸಿಂಧ್ಯಾರವರು, ಮಾನ್ಯ ಏಕಾಂತಯ್ಯನವರು, ಕೌಜಲಗಿಯವರು ನಿಯಮ 311ರ ಕೆಳಗಡೆ ವರದಕ್ಷಿಣೆ ವಿರುದ್ಧವಿರುವ ಕೇಸ್ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಇವೆರಡರ ಬಗ್ಗೆ ನಾಳೆ ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಈಗ ಇಲ್ಲ. ಈಗ ನಾನು ಪ್ರಸ್ತಾಪ ಮಾಡಿದರೂ ಸಹ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಹಾಗಾಗಿ ನಾಳೆ ಎರಡನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಅದನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ.

ಕಲ್ಕತ್ತದಲ್ಲಿ 17.3.93ರ ಬೆಳಗಿನ ಜಾವ 4 ಗಂಟೆಗೆ ಬಾಂಬ್ ಆಸ್ಫೋಟ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೆ, ಕಲ್ಕತ್ತಾದಲ್ಲಿ ಇವತ್ತು ಬೆಳಗಿನ ಜಾವ 4 ಗಂಟೆಗೆ ಬಾಂಬ್ ಆಸ್ಫೋಟವಾಗಿದೆ. ಇಡೀ ದೇಶದಲ್ಲಿ ಇದೊಂದು ದೊಡ್ಡ ಜಾಲವಿರುವ ಹಾಗೆ ಕಾಣುತ್ತಿದೆ. ನಾವು ಇತ್ತೀಚೆಗೆ ಮುಂಬೈನಲ್ಲಿ ನಡೆದಿರತಕ್ಕಂಥ ಘಟನೆಯ ಬಗ್ಗೆ ಈ ಸದನದಲ್ಲಿ ನಮ್ಮೆಲ್ಲ ಸದಸ್ಯರ ಮತ್ತು ತಮ್ಮ ಮೂಲಕವಾಗಿ ಮಾನ್ಯ ಮುಖ್ಯಮಂತ್ರಿಗಳು 25 ಲಕ್ಷ ರೂಪಾಯಿಗಳನ್ನು ಕಳುಹಿಸಿ ನಮ್ಮ ವೇದನೆಯನ್ನು ವ್ಯಕ್ತಮಾಡಿದ್ದಾರೆ. ನಾವು ಒಂದು ತೀರ್ಮಾನವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದು ನಿಜವಾಗಿಯೂ ನಮ್ಮ ದೇಶವನ್ನೇ ನಾಶ ಮಾಡತಕ್ಕಂಥ ಒಂದು ವಿಧ್ವಂಸಕ ಕೃತ್ಯ ಹಾಗೂ ಬಹಳ ಹೇಯವಾದಂಥ ಕೃತ್ಯವಾಗಿದೆ. ಇದನ್ನು ಅತ್ಯಂತ ಕಠಿಣವಾದ ಶಬ್ದಗಳಲ್ಲಿ ನಾವೆಲ್ಲರೂ ಖಂಡಿಸುವುದರ ಜೊತೆಗೆ ಪ್ರಧಾನಿಗಳು ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಬೇಕಾಗುತ್ತದೆ. ಇದು ಮುಂಬೈನಲ್ಲಿ ಆಗಿದೆ, ಕಲ್ಕತ್ತಾದಲ್ಲಿ ಆಗಿದೆ, ನಾಳೆ ಇಲ್ಲಿಯೂ ಆಗಬಹುದು. ಇದನ್ನು ನೋಡಿದರೆ ಇದೊಂದು ದೊಡ್ಡ ಭಾರಿ ಸಂಚು, ಪಿತೂರಿ ಇದ್ದ ಹಾಗೆ ಕಾಣುತ್ತಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ ಎನ್ನುವುದರ ಬಗ್ಗೆ. ರಾಜ್ಯದ ಜನತೆಗೆ ಮುಖ್ಯಮಂತ್ರಿಗಳು ತಿಳಿಸಬೇಕಾಗುತ್ತದೆ. ಮತ್ತೆ ಸರ್ಕಾರದವರು ಈ ಸದನದ ಸದಸ್ಯರುಗಳ ಸಹಕಾರವನ್ನು ಹಾಗೂ ಜನಗಳ ಸಹಕಾರ ಯಾವ ರೀತಿ ಬೇಕಾಗುತ್ತದೆ ಎನ್ನುವುದರ ಬಗ್ಗೆ ನಮಗೆ ತಿಳಿಸಿ ನಮ್ಮಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಿಳಿಸಬೇಕಾಗುತ್ತದೆ. ಇದಕ್ಕೆ ಮುಂಜಾಗ್ರತೆ ಕ್ರಮಗಳನ್ನು ಏನು ತೆಗೆದುಕೊಳ್ಳುತ್ತೀರಿ ? ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂತಹ ಕೃತ್ಯ ಯಾವತ್ತೂ ನಡೆದಿಲ್ಲ. ಇದರಿಂದಾಗಿ ನಮ್ಮ ಪೋಲೀಸರಿಗೆ ವಿಶೇಷವಾದ ತರಬೇತಿಯು ಬೇಕಾಗುತ್ತದೆ. ಬಾಂಬ್‌ಗಳನ್ನು ಸ್ಫೋಟಗಳನ್ನು ಬಹುಮಹಡಿ ಕಟ್ಟಡಗಳಲ್ಲಿ ಅಥವಾ ಇನ್ನಿತರ ಕಡೆಗಳಲ್ಲಿ ಇಡತಕ್ಕಂಥ ಒಂದು ವಿಧ್ವಂಸಕ ಕೃತ್ಯಗಳು ಏನು ನಡೆಯುತ್ತದೆ ಅದರ ಬಗ್ಗೆ ನಮ್ಮ ಪೋಲೀಸರಿಗೆ ತರಬೇತಿಯು